# ಮನ ಕಲಕಿದ ಅಂಗವಿಕಲರ ಬಾಧೆ

**ಸಹನಾ**

**ಉದಯದ 'ಕಣ್ಮಣಿ'ಯ ಸುಧಾ**



★ *ಅಂಗವಿಕಲ ಪಾತ್ರದ ಸವಾಲು ಹೇಗಿರುತ್ತೆ?*

ವಿಕಲಾಂಗೆಯಾಗಿ ಕಾಣಿಸಿಕೊಳ್ಳುತ್ತಿರುವುದು ಇದೆ ನನ್ನ ಮೊದಲ ಪಾತ್ರ. ಇದರಲ್ಲಿ ಒಂದು ಕಾಲು ಉದ್ದ ಮತ್ತೊಂದು ಗಿಡ್ಡವಿದೆ. ಕೋಲೂರಿಕೊಂಡು ನಡೆಯಬೇಕು. ನಟನೆ ಸಹಜವಾಗಿ ಕಾಣಿಸಬೇಕು ಎನ್ನುವ ಕಾರಣಕ್ಕೆ ಕೋಲಿನ ಮೇಲೆ ತೋಳ ಭಾರವನ್ನು ಹಾಕಿ ನಟಿಸುತ್ತಿದ್ದೆ. ರಾತ್ರಿ ಮಲಗುವ ಹೊತ್ತಿಗೆ ಕೈ ತುಂಬಾ ನೋಯುತ್ತಿತ್ತು. ಆರಂಭದಲ್ಲಿ ಏಕೆ ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ಶೂಟಿಂಗ್ ಇದ್ದ ದಿನಗಳಲ್ಲಿ ಮಾತ್ರ ಸಂಜೆ ನೋವು ಕಾಣಿಸಿಕೊಳ್ಳುವುದನ್ನು ಗುರುತಿಸಿದ ಮೇಲೆ ಕಾರಣ ಏನೆಂಬುದು ಗೊತ್ತಾಯಿತು. ಶಾಶ್ವತ ಅಂಗವೈಕಲ್ಯದಿಂದ ಬಾಧಿತರಾಗಿರುವವರ ನೋವು ಎಷ್ಟಿರಬಹುದು ಎಂದು ಮನಸ್ಸು ಮರುಕಪಡುತ್ತದೆ. ಪಾತ್ರ ಸವಾಲಿನಿಂದ ಕೂಡಿದ್ದರೂ ತುಂಬಾ ಒಳ್ಳೆಯ ಪಾತ್ರ.

ನನ್ನ ತಮ್ಮನೇ ಕಥೆಯ ನಾಯಕ. ನನ್ನ ಪತಿ ಮನೆ ಅಳಿಯ. ನನ್ನ ತಮ್ಮ ದೊಡ್ಡ ಶ್ರೀಮಂತ. ಆತನ ಹೆಂಡತಿ ಮೃತಪಟ್ಟಿದ್ದಾಳೆ. ಮತ್ತೊಂದು ಮದುವೆ ಮಾಡುವ ಹಂಬಲ ನಮ್ಮದು. ನನ್ನ ಪತಿ ನೋಡುವರ ಕಣ್ಣಿಗೆ ಒಳ್ಳೆಯವರಂತೆ ಕಾಣಿಸಿಕೊಳ್ಳುತ್ತಾರೆ. ತುಂಬಾ ಕಿರುಕುಳವನ್ನು ನೀಡುತ್ತಾರೆ. ಅವರ ಕುತಂತ್ರ ಅರ್ಥವಾಗುವುದಿಲ್ಲ. ನನಗೆ ತಮ್ಮನೇ ಪ್ರಪಂಚ. ಅವನಿಗೆ ಒಂದಿಷ್ಟು ನೋವಾಗದಂತೆ ನೋಡಿಕೊಳ್ಳಬೇಕು ಎನ್ನುವುದು ನನ್ನಾಸೆ.

★ *ಜನಪ್ರಿಯತೆಯನ್ನು ಹೇಗೆ ನಿಭಾಯಿಸುತ್ತೀರಿ?*

ಸಾಮಾಜಿಕ ಮಾಧ್ಯಮಗಳಲ್ಲಿ ವೈಯಕ್ತಿಕ ಮಾತುಕತೆ ಇಲ್ಲವೇ ಇಲ್ಲ. ನಟನೆ, ಪಾತ್ರ, ಧಾರಾವಾಹಿಗೆ ಸಂಬಂಧಿಸಿದಂತೆ ಮಾತ್ರ ಪ್ರತಿಕ್ರಿಯೆ ನೀಡುತ್ತೇನೆ. ಸ್ಕ್ರೀನ್ ಮೇಲೆ ಕಾಣಿಸುವಂತೆಯೇ ನಾನು ಕಾಣದೆ ಇರುವುದರಿಂದ ಥಟ್ ಅಂತ ಯಾರೂ ನನ್ನನ್ನು ಗುರುತಿಸುವುದಿಲ್ಲ. ಮಾಲ್‌ಗಳಲ್ಲಿ ಕೆಲವರು ಗುರುತಿಸಿ ಮಾತಾಡಿಸುತ್ತಾರೆ. ಕೆಲವೊಂದು ಕಡೆ ಜನರು ತೋರಿಸುವ ಪ್ರೀತಿ ಖುಷಿಯನ್ನು ಉಂಟುಮಾಡುತ್ತದೆ.

★ *ದೈಹಿಕ ಮತ್ತು ಮಾನಸಿಕ ಫಿಟ್ನೆಸ್‌ಗೆ ಏನು ಮಾಡುತ್ತೀರಿ?*

ಮನೆಯಲ್ಲಿ ಇದ್ದಾಗ ಒಂದು ಕ್ರಮ, ಶೂಟಿಂಗ್ ಮನೆಯಲ್ಲಿ ಒಂದು ಕ್ರಮವನ್ನು ಪಾಲಿಸುತ್ತೇನೆ. ಅನ್ನ ಬಳಸುವುದು ಕಡಿಮೆ. ಬೆಳಿಗ್ಗೆ ಹಣ್ಣನ್ನು ತಿಂದ ಮೇಲೆ ತಿಂಡಿ ತೆಗೆದುಕೊಳ್ಳುತ್ತೇನೆ. ಶೂಟಿಂಗ್ ಮನೆಯಲ್ಲಿ ಗೋಧಿನುಚ್ಚಿನ ಅನ್ನ ತಿನ್ನುತ್ತೇನೆ. ನನಗೆ ಅಮ್ಮ ಮಾಡಿದ ಅಡುಗೆ ಇಷ್ಟ. ಭಾನುವಾರ ಒಂದು ಹೊತ್ತು ಮಾತ್ರ ಮಾಂಸಾಹಾರ ಸೇವನೆ. ರಾತ್ರಿ ಬೇಗ ಮಲಗುವ ಅಭ್ಯಾಸ ಇದೆ. ಟೀ, ಕಾಫಿ ಕುಡಿಯುವುದೇ ಇಲ್ಲ. ಜಿಮ್‌ಗೆ ಹೋಗುತ್ತೇನೆ. ಕೆಲಸದ ಒತ್ತಡದಲ್ಲಿ ಕೆಲವೊಮ್ಮೆ ಅದು ತಪ್ಪುತ್ತದೆ.

★ *ಟ್ರಾವೆಲ್ ಮಾಡ್ತೀರಾ?*

ಹತ್ತು ಜನ ಗೆಳೆಯರ ಗುಂಪು ನಮ್ಮದಿದೆ. ಸುತ್ತಾಡಲು ಹೊರಟರೆ ಎಲ್ಲರೂ ಒಟ್ಟಿಗೆ ಹೋಗುತ್ತೇವೆ. ಯಾರಾದರೂ ಒಬ್ಬರು ತಪ್ಪಿಸಿದರೆ ನಮ್ಮ ಟ್ರಿಪ್ ರದ್ದಾಗುತ್ತದೆ. ಹೆಚ್ಚಾಗಿ ನಮ್ಮ ಕುಟುಂಬದ ಜೊತೆ ಹೊರ ಹೋಗುತ್ತೇವೆ. ಹೋದಲ್ಲಿ ಅಪ್ಪ– ಅಮ್ಮ ಸ್ಥಳ ವೀಕ್ಷಣೆಗೆ ಪ್ರಾಮುಖ್ಯತೆ ಕೊಟ್ಟರೆ ನಾನು ತಿನ್ನಲು ಪ್ರಮುಖ್ಯತೆ ಕೊಡುತ್ತೇನೆ. ಇಲ್ಲವೇ ಏನಾದರೂ ಖರೀದಿ ಮಾಡಲು ಯತ್ನಿಸುತ್ತೇನೆ. ಈ ಕಾರಣಕ್ಕೆ ಅಪ್ಪ ನೀನು ಬರುವುದೇ ವ್ಯರ್ಥ ಎಂದು ಕಾಡಿಸುತ್ತಾರೆ.

★ *ಮತ್ತಿನ್ನೇನು ಮಾಡುತ್ತೀರಿ?*

ನಾನು ಮೊದಲು ವಿಪ್ರೊದಲ್ಲಿ ಎಚ್‌ಆರ್ ಆಗಿ ಕೆಲಸ ಮಾಡುತ್ತಿದ್ದೆ. ನಟನೆಗೆ ಬಂದ ಮೇಲೆ ವೃತ್ತಿಯನ್ನು ಬಿಡಬೇಕಾಯಿತು. ಈಗ ಎಚ್‌ಆರ್. ಕನೆಕ್ಟ್ ಎಂಬ ಒಂದು ತಂಡವನ್ನು ರಚಿಸಿಕೊಂಡು ಸಾಕ್ಷ್ಯ ಚಿತ್ರವನ್ನು ನಿರ್ಮಿಸುತ್ತಿದ್ದೇವೆ. ಇದರಲ್ಲಿ ಬಹುತೇಕರು ನಟನೆಯ ಹಿನ್ನೆಲೆ ಇಲ್ಲದವರು. ಎಲ್ಲರೂ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡುವವರು ನಟಿಸಿದ ಕಿರುಚಿತ್ರ. ಇದರಲ್ಲಿ ಕಾರ್ಮಿಕರ ಕರ್ತವ್ಯವನ್ನು ತಿಳಿಸುವ ಜೊತೆಗೆ ಅವರಿಗೆ ಕಾನೂನಿನ ಅರಿವನ್ನು ಮೂಡಿಸಲಾಗುತ್ತದೆ. ಕೆಲಸದ ಲೋಪ ಇಲ್ಲವೇ ಕಾರ್ಮಿಕರಿಗೆ ಆಗಬಹುದಾದ ತೊಂದರೆಗೆ ಸಂಬಂಧಿಸಿದ ವಿಷಯದ ಮೇಲೆ ಇನ್ನೂ ಅನೇಕ ಕಿರುಚಿತ್ರ ಮಾಡುವ ಉದ್ದೇಶವನ್ನು ಹೊಂದಿದ್ದೇವೆ. ಎಚ್‌ಆರ್ ಕನೆಕ್ಟ್‌ನ ಮೊದಲ ಚಿತ್ರ (https://youtu.be/HdJKmkuiH8s) ಯೂಟ್ಯೂಬ್‌ನಲ್ಲಿ ಲಭ್ಯ ಇದೆ.